ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 431
ಸದಸ್ಯರ ಹೆಸರು : ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ)
ಉತ್ತರಿಸುವ ದಿನಾಂಕ : 16.12.2021
ಉತ್ತರಿಸುವ ಸಚಿವರು : ಜಲಸಂಪನ್ಮೂಲ ಸಚಿವರು

ಕ್ರ ಸಂ	ಪ್ರಶ್ನೆಗಳು	ಉತ್ತರಗಳು
ಅ)	ಜಲ ಸಂಪನ್ಮೂಲ ಇಲಾಖೆಯಲ್ಲಿ ಹಣ ಭರವಸೆ ಪತ್ರ (ಎಲ್.ಓ.ಸಿ) ಬಿಡುಗಡೆಗೊಳಿಸುವಲ್ಲಿ ಅನುಸರಿಸಲಾಗುವ ಮಾನದಂಡಗಳೇನು; (ಪೂರ್ಣ ವಿವರ ನೀಡುವುದು)	ಆಯವ್ಯಯದಲ್ಲಿ ವಿವಿಧ ಲೆಕ್ಕ ಶಿರ್ಷಿಕೆಗಳಡಿಯಲ್ಲಿ ಒದಗಿಸಲಾದ ಅನುದಾನವನ್ನು ಕಾಲಕಾಲಕ್ಕೆ ಆರ್ಥಿಕ ಇಲಾಖೆಯಿಂದ ಹೊರಡಿಸಲಾಗುವ ಆದೇಶ ಮತ್ತು ಮಾರ್ಗಸೂಚಿಗಳನ್ವಯ ನಿಗಮ, ಪ್ರಾಧಿಕಾರ ಹಾಗೂ ವಲಯಗಳಿಗೆ ಹಣ ಬಿಡುಗಡೆ ಮಾಡಲಾಗುತ್ತಿದೆ.
ಆ)	ಕಳೆದ 2 ವರ್ಷಗಳಿಂದ ಬಿಡುಗಡೆಗೊಳಿಸಲಾದ ಮೊತ್ತವೆಷ್ಟು;	ಜಲ ಸಂಪನ್ಮೂಲ ಇಲಾಖೆಯಡಿ ಕಳೆದ 2 ವರ್ಷಗಳಲ್ಲಿ ಬಿಡುಗಡೆಗೊಳಿಸಲಾದ ಅನುದಾನದ ಮೊತ್ತದ ವಿವರಗಳು ಈ ಕೆಳಗಿನಂತಿದೆ: (1) 2019–20 – ರೂ.16105.11 ಕೋಟಿ. (2) 2020–21 – ರೂ.18569.30 ಕೋಟಿ.
ಇ)	ಜೇಷ್ಠತೆಯನ್ನು ಪರಿಗಣಿಸದೆ, ಮಾನದಂಡಗಳನ್ನು ಉಲ್ಲಂಘಿಸಿ, ಎಲ್.ಓ.ಸಿ. ಬಿಡುಗಡೆಗೊಳಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಇಲಾಖೆಯಡಿಯ ನಿಗಮ, ಪ್ರಾಧಿಕಾರ ಹಾಗೂ ವಲಯಗಳಿಗೆ ಯೋಜನಾ ಕಾಮಗಾರಿಗಳ ಪ್ರಾಮುಖ್ಯತೆ, ಭೂಸ್ವಾಧೀನ ಪ್ರಕ್ರಿಯೆಗೆ ಪಾವತಿ, ಕೇಂದ್ರ ಸರ್ಕಾರ / ವಿಶ್ವ ಬ್ಯಾಂಕ್ / ನಬಾರ್ಡ್ ಅಡಿ ಅನುಷ್ಠಾನಕ್ಕೆ ಕೈಗೊಂಡಿರುವ ಕಾಮಗಾರಿಗಳಿಗೆ ಬಿಲ್‌ಗಳ ಪಾವತಿ ಇತ್ಯಾದಿ ಅಂಶಗಳನ್ನು ಪರಿಗಣಿಸಿ ಜೇಷ್ಠತೆ ಆಧಾರದ ಮೇಲೆ ಬಿಲ್ ಪಾವತಿಗೆ ಕ್ರಮ ವಹಿಸಲಾಗುತ್ತಿದೆ.
ಈ)	ಹಾಗಾದ್ದಲ್ಲಿ, ಎಷ್ಟು ಪ್ರಕರಣಗಳಲ್ಲಿ, ಎಷ್ಟು ಮಂದಿಗೆ, ಎಷ್ಟು ಮೊತ್ತದ, ಎಲ್.ಓ.ಸಿ. ಬಿಡುಗಡೆಗೊಳಿಸಲಾಗಿದೆ? (ಜೇಷ್ಠತೆ ಪರಿಗಣಿಸಿ ಹಾಗೂ ಜೇಷ್ಠತೆ ಪರಿಗಣಿಸದೆ ನೀಡಲಾಗಿರುವ ಎಲ್.ಓ.ಸಿ. ಬಗ್ಗೆ ಪ್ರತ್ಯೇಕವಾಗಿ ಪೂರ್ಣ ವಿವರ ನೀಡುವುದು)	

ಸಂಖ್ಯೆ:ಜಸಂಇ 127 ಡಬ್ಲ್ಯೂಬಿಎಂ 2021

(ಗೋವಿಂದ ಎಂ.ಕಾರಜೋಳ)
ಜಲ ಸಂಪನ್ಮೂಲ ಸಚಿವರು